'ಎಂಥಾ ಕಾಲ ಬಂತಲ್ವಾ? ಇಂಥದ್ದೊಂದನ್ನು ನಾನು ನನ್ನ ಜೀವಮಾನದಲ್ಲಿ ನೋಡ್ತೇನೆ ಅಂತ ಎಣಿಸಿಯೇ ಇರ್ಲಿಲ್ಲ.' ದಯಾನಂದ ತನ್ನ ಪಕ್ಕ ಕೂತಿದ್ದ ಸಾಧುವಿನ ಬಳಿ ಗೊಣಗಿದ. ಆ ಸಾಧು ಒಂದು ಕ್ಷಣ ಅವನ್ನು ನೋಡಿ ನೆಗ್ಯಾಡಿದ. ಅನಂತರ ಶೂನ್ಯದತ್ತ ನೋಡಿದ. ತನ್ನ ಜೋಳಿಗೆಯ ಒಳಗೆ ಕೈ ಹಾಕಿದ. ಚುಟ್ಟಾ ಒಂದನ್ನು ತೆಗೆದ. ಬೆಂಕಿ ಹಚ್ಚಿ ಪುಸು ಪುಸು ಅಂತ ಹೊಗೆ ಬಿಟ್ಟ. ಬೇಕಾ ಎಂಬಂತೆ ದಯಾನಂದನ ಎದುರು ಹಿಡಿದ. ಅವ ಬೇಡ ಎಂಬಂತೆ ತಲೆ ಆಡಿಸಿದ. 'ಈ ಕಾಲ ಅಂತ ಅಲ್ಲವೋ ತಮ್ಮಾ, ಎಲ್ಲ ಕಾಲವೂ ಹೀಗೆಯೇ. ಒಳಿತು ಕೆಡುಕು ಅಂತ ಇಲ್ಲ. ನಾವು ಒಳ್ಳೆಯವರಾದ್ರೆ ಊರು ಒಳ್ಳೇದು ಆಗಿ ಇರ್ತದೆ. ಇಲ್ಲಾಂದ್ರೆ ಎಲ್ಲವೂ ಕೆಟ್ಟದ್ದೇ.' ಅಂದ. ಅಷ್ಟು ಹೊತ್ತಿಗೆ ಅವನ ಜೊತೆಗಾರರು ಇಬ್ಬರು ಭಿಕ್ಷಾಟನೆಗೆ ಹೋಗಿದ್ದವರು ಒಂದಿಷ್ಟು ರೊಟ್ಟಿ ಭಾಜಿ ತಂದರು. ಎಲ್ಲ ಹಂಚಿಕೊಂಡು ತಿನ್ನಲು ಸಿದ್ಧವಾದರು. 'ತಮ್ಮಾ ಬಾ ನೀನೂ ತಗೊ' ಅಂದ. ಒಮ್ಮೆ ಬೇಡ ಅಂದ. ಆದರೆ, ಎರಡು ದಿನಗಳಿಂದ ಮನೆಬಿಟ್ಟು ನಡ್ದು ನಡ್ದು ಬೆವ್ರಿ ಚಂಡಿ ಆಗಿದ್ದ. ಮಾತ್ರವಲ್ಲ, ಕೈ ಕಾಲು ಎಲ್ಲ ಬಚ್ಚಿತ್ತು. ಕಂಡಾಬಟ್ಟೆ ಸಾಕಾಗಿತ್ತು. ರೊಟ್ಟಿ ಭಾಜಿಯ ಪರಿಮಳ ಘಂ ಅಂತ ಮೂಗಿಗೆ ಅಡರಿದಾಗ ಹಸಿವು ಮತ್ತಷ್ಟು ಹೆಚ್ಚಾಗಿತ್ತು. ದಾಕ್ಷಿಣ್ಯದಿಂದ ಮೆಲ್ಲ ಕೈ ಒಡ್ಡಿದ. ಕೈಗೆ ಬಿದ್ದ ರೊಟ್ಟಿ ಭಾಜಿಯನ್ನು ಗಬಗಬ ತಿಂದ. ಹಾಗೆ ತಿನ್ನುವಾಗ ಗಂಟಲಲ್ಲಿ ಸಿಕ್ಕಿಕೊಂಡಿತು. ಬಿಕ್ಕಳಿಕೆ ಬಂತು. ಮತ್ತೊಬ್ಬ ಸಾಧು ನೀರು ಕೊಟ್ಟ. ಅದನ್ನು ಕುಡಿದಾಗ ಅಯ್ಯಬ್ಬ ಅನಿಸಿತು. ಕಣ್ಣಲ್ಲಿ ನೀರು ಆಡಿತು. ದೊಡ್ಡದೊಂದು ಸ್ವಾಸ ಬಿಟ್ಟ. 'ತಮ್ಮಾ ಏನೋ ಬೇಜಾರಿನಲ್ಲಿ ಇದ್ದೀಯ. ಇದು ನಿಂಗೆ ಒಬ್ನಿಗೆ ಬಂದ ಕಷ್ಟ ಅಲ್ಲ. ಇಡೀ ಜಗತ್ತಿಗೇ ಬಂದದ್ದು. ನಮ್ಮ ಬಳಿ ಹೇಳಿಕೋ. ಒಂದಿಷ್ಟು ಮನಸ್ಸು ಹಗುರಾಗ್ತದೆ.' ಅಂದ. ದಯಾನಂದನ ಗಂಟಲು ಬಿಗಿಯಿತು. 'ನಿನ್ ಹೆಸ್ರೇನು? ಊರು ಯಾವುದು? ಎಲ್ಲ ಹೇಳ್ಕೋ' ಮತ್ತೊಬ್ಬ ಸಾಧು, ದಯಾನಂದನ ಹೆಗಲ ಮೇಲೆ ಕೈ ಇಟ್ಟು ಹೇಳಿದ. ದಯಾನಂದನಿಗೆ ಎಲ್ಲಿತ್ತಾ ಏನ ದುಃಖ, ಸೇಂಕಿ ಸೇಂಕಿ ಕೂಗಿದ. ಒಂದಷ್ಟು ಹೊತ್ತು ಕೂಗಿ ಸಮಾಧಾನ ಆದ ಅನಂತ್ರ ತನ್ನ ಕತೆ ಹೇಳ್ಳಿಕ್ಕೆ ಸುರು ಮಾಡಿದ.

'ಸಾಧುಗಳೇ ನಾನು ದಯಾನಂದ ಅಂತ. ಇಲ್ಲೇ ಹತ್ತಿರದ ಕುದುರೇಬೆಟ್ಟಿನವ. ಇಲ್ಲಿಂದ ಸುಮಾರು ಐವತ್ತು ಕಿಲೋಮೀಟರ್. ಊರಲ್ಲಿ ಮನೆ, ಸ್ವಲ್ಪ ಜಮೀನು ಎಲ್ಲ ಉಂಟು. ಅದ್ರಲ್ಲೆ ಎಷ್ಟು ಬೇಕಾ ಅಷ್ಟಕ್ಕೆ ಬೆಳೆ ತೆಕ್ಕೊಂಡು ನಾನು ಸಾ ನನ್ನ ಹೆಂಡ್ತಿ ಸಾ ಬದುಕ್ತಾ ಇದ್ದೆವು. ನಮಗೆ ಮಕ್ಕಳಿಲ್ಲ. ನಾವು ನನ್ನ ತಮ್ಮ ದಯಾಕರನನ್ನೇ ಮಗ ಅಂತ ಎಣಿಸಿ ಸಾಕಿದ್ದೆವು. ನಮ್ಮ ಮನೆಯಲ್ಲಿ ನಾನೇ ದೊಡ್ಡವ. ನನ್ನ ನಂತ್ರ ಮೂವರು ತಂಗಿಯಂದಿರು. ಕೊನೆಯವ ತಮ್ಮ. ಅವ ಹುಟ್ಟಿದ ವರ್ಷವೇ ನನ್ನ ಅಪ್ಪನನ್ನು ಕಳಕೊಂಡೆ. ಹೆಳೆಗೆ ಎರಡು ದಿನಗಳ ಜ್ವರ ಅಷ್ಟೇ. ಆಮೇಲೆ ಮೇಲೆ ಏಳ್ಳೇ ಇಲ್ಲ. ಹಾಗಾಗಿ ಇಡೀ ಕುಟುಂಬದ ಜವಾಬ್ದಾರಿ ನನ್ನ ಮೇಲೆ ಬಿತ್ತು. ನಾನು ಏಳನೇ ಕ್ಲಾಸಿಗೇ ಶಾಲೆ ಬಿಟ್ಟೆ. ಅಲ್ಲಿ ಇಲ್ಲಿ ಕೆಲಸ ಮಾಡಿ ಅಮ್ಮ, ತಂಗಿಯಂದಿರು ಹಾಗೂ ತಮ್ಮನನ್ನು ಸಾಕಿದೆ. ಮೂವರು ತಂಗಿಯಂದಿರು ಚೆಂದ ಓದಿ ಒಳ್ಳೆಯ ಕೆಲಸಕ್ಕೆ ಸೇರಿದ್ರು. ಅವರಿಗೆಲ್ಲ ಮದುವೆ ಮಾಡಿಸುವ ಜವಾಬ್ದಾರಿ ನನ್ನ ಮೇಲೆಯೇ ಬಿದ್ದಿತ್ತು. ಹೀಗಾಗಿ, ನಾನು ಮದುವೆ ಆಗುವಾಗ ನಂಗೆ ಪ್ರಾಯ ಮಿಕ್ಕಿತ್ತು. ನಲ್ವತ್ತರ ಹತ್ತಿರ ಆಗಿದ್ದವನಿಗೆ ಸಮಕಟ್ಟಿನ ಹುಡುಗಿ ಸಿಗ್ಲಿಲ್ಲ. ಆದರೂ ಗಟ್ಟದ ಮೇಲಿನ ಒಂದು ಪಾಪದವರ ಹೆಣ್ಣನ್ನು ಮದುವೆಯಾದೆ. ಇಷ್ಟಾಗುವಾಗ ಅಮ್ಮ ಸಾ ತೀರಿಕೊಂಡ್ರು. ದಯಾಕರ ಚೆಂದ ಓದಿ ಉದ್ಧಾರ ಆಗ್ತಾನೆ ಅಂತವೇ ನಾನು ಎಣಿಸಿದ್ದೆ. ಆದ್ರೆ ಅವ ಬರ್ಕತ್ತು ಆಗ್ಲಿಲ್ಲ. ಎಸ್ಸೆಸ್ಸೆಲ್ಸಿಗೆ ಬರುವಾಗ್ಲೇ ಬೇಡದೇ ಇದ್ದದ್ದು ಕಲ್ತ. ಒಂದು ದಿನ ನಾನು ಸಾ ನನ್ನ ಹೆಂಡತಿ ಸಾ ಸಮಾ ಬುದ್ಧಿವಾದ ಹೇಳಿದ್ದೆವು. ಮಕ್ಕಳಿಲ್ಲದ ನಮಗೆ ನೀನೇ ದಿಕ್ಕು. ಯಾಕೆ ಹೀಗೆ ಹಡೆಗಳ ಸಾವಾಸ ಮಾಡಿ ಹಾಳಾಗ್ತಿ? ಓದಿ ಏನಾದ್ರೂ ಉದ್ಧಾರ ಆಗು. ನಂಗೆ ಸಾ ಮನೆಯ ಜವಾಬ್ದಾರಿ ಹೊರ್ಲಿಕ್ಕೆ ಪ್ರಾಯ ಆಗ್ತಾ